45.	Susheelamma, w/o late K.V. Shankare Gowda	G
46.	Subhash Koujalagi, MLA	G
47.	G.A. Bhava	C
48.	Geetha Sukumaran	G
49.	Somashekar M Sali	B
50.	Abdulla Kunni	G
51.	Derrick MM Fulinfaw MLA	G
52.	Shivanna	B
53.	G.S. Venkataramana Iyer	G
54.	G.K. Bekal	G
55.	R. Devaraj	B
56.	A. Venkatesh Naik, MP	G
57.	Brig. Ashok Nagpal	C
58.	B.K. Venkatesh prasad	B
59.	Prof. S. Shetter	B
60.	S.M. Patil	G
61.	B.R. Narayan	B
62.	Neelam Sexena	G
63.	Usha S Rao	B
64.	K. Narayan	G
65.	Ramachandra	G
66.	K. Subramanya	G
67.	Ananda Devadiga	G
68.	N. Prabhakara Shetty	G
69.	Smt. L.B.R. Naidu	G
70.	Mohandas K.K	G
71.	Raj K Sukla	G
72.	Brig. Sen Gupta	G
73.	M.G. Kulkarni	G
74.	P.U. Vijayashekaran	G
75.	Manjula Devi	B

ಐ.ಎ.ಎಸ್., ಐ.ಪಿ.ಎಸ್. ಮತ್ತು ಐ.ಎಫ್.ಎಸ್. ಅಧಿಕಾರಿಗಳ ಮೇಲೆ ಹೂಡಿರುವ ಮೊಕದ್ದಮೆಗಳು

197 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಐಎಎಸ್, ಐಪಿಎಸ್ ಮತ್ತು ಐಎಫ್ಎಸ್ ಅಧಿಕಾರಿಗಳ ಮೇಲೆ 1989ರಿಂದ ಇಲ್ಲಿಯವರೆಗೆ ಹೂಡಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು

ಹಾಗೂ ಎಷ್ಟು ಮೊಕದ್ದಮೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ ಹಾಗೂ ಎಷ್ಟು ಮೊಕದ್ದಮೆಗಳು ಬಾಕಿ ಉಳಿದಿವೆ?

ಅ) ಸರ್ಕಾರದವರು ಯಾವುದಾದರೂ ಮೊಕದ್ದಮೆಗಳನ್ನು ವಾಪಸ್ಸು ಪಡೆದಿದ್ದಾರೆಯೇ?

ಇ) ಹಾಗಿದ್ದಲ್ಲಿ, ಯಾವ ಯಾವ ಪ್ರಕರಣಗಳನ್ನು ವಾಪಸ್ಸು ಪಡೆಯಲಾಗಿದೆ ಹಾಗೂ ವಾಪಸ್ಸು ಪಡೆದಿರುವ ಪ್ರಕರಣದ ಆದೇಶ ಪ್ರತಿಗಳನ್ನು ಒದಗಿಸಲಾಗುವುದು?

ಈ) ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕರೊಬ್ಬರ ವಿರುದ್ಧ ಇದ್ದ ಪ್ರಕರಣವನ್ನು ಕೈಬಿಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಅದರ ವಿವರಗಳನ್ನು ಒದಗಿಸುವುದು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ)

	ಐಎಎಸ್	ಐಪಿಎಸ್	ಐಎಫ್ಎಸ್
ಹೂಡಿರುವ ಮೊಕದ್ದಮೆಗಳ ಸಂಖ್ಯೆ	1	2	-
ಕ್ರಮ ಕೈಗೊಳ್ಳಲಾದ ಮೊಕದ್ದಮೆಗಳ ಸಂಖ್ಯೆ	-	-	-
ಬಾಕಿ ಉಳಿದಿರುವ ಮೊಕದ್ದಮೆಗಳ ಸಂಖ್ಯೆ	1	2	-

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಮೊಕದ್ದಮೆ ಹೂಡಿರಲಿಲ್ಲ. ಆದ್ದರಿಂದ ಪ್ರಕರಣವನ್ನು ಕೈಬಿಟ್ಟಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಪೋಲೀಸ್ ಅಧಿಕಾರಿಗಳು ಆರ್ಡರ್ಲಿ ಎಂಬ ಹೆಸರಿನಲ್ಲಿ ಅನಧಿಕೃತವಾಗಿ ಜೀತದಾಳುಗಳ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದು

192 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಯಿಂದ ಡಿ.ಜಿ.ಪಿ.ಯ ಹುದ್ದೆಯವರೆಗೆ ಅನಧಿಕೃತವಾಗಿ ಪೊಲೀಸ್ ಕಾನ್ಸ್‌ಟೇಬಲ್, ಹೆಡ್ ಕಾನ್ಸ್‌ಟೇಬಲ್ ಹಾಗೂ ಅಧಿಕಾರಿಗಳನ್ನು ಆರ್ಡರ್ಲಿ ಎಂಬ ಹೆಸರಿನಲ್ಲಿ ಅನಧಿಕೃತವಾಗಿ ಜೀತದಾಳುಗಳ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಜನರು ಈ ರೀತಿಯ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. (ಸಿಎಆರ್:ಸಿಒಡಿಯಿಂದ ಪ್ರತ್ಯೇಕವಾಗಿ ವಿವರ ನೀಡುವುದು)

ಇ) ಈ ರೀತಿ ಪೊಲೀಸರನ್ನು ಬಳಸುತ್ತಿರುವುದರಿಂದ ಶಾಂತಿ ಹಾಗೂ ಶಿಸ್ತುಪಾಲನೆಗೆ ಪೊಲೀಸರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?